ಕರ್ನಾಟಕ ಸರ್ಕಾರ

**ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ**

ಸಂಖ್ಯೆ: ತಾಂಶಿನಿ 03 ಸಿಡಿಸಿ(1) 2019–20

ಆಯುಕ್ತರ ಕಚೇರಿ
ಅರಮನೆ ರಸ್ತೆ, ಬೆಂಗಳೂರು–560 001.
ದಿನಾಂಕ: 21–04–2022.

## ಜ್ಞಾಪನ

ವಿಷಯ: ರಾಜ್ಯದ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳಲ್ಲಿನ ಕೋರ್ಸುಗಳಿಗೆ N.B.A ಮಾನ್ಯತೆ ಪಡೆಯುವ ಬಗ್ಗೆ.

ಉಲ್ಲೇಖ: ಈ ಕಚೇರಿ ಪತ್ರ ಸಮ ಸಂಖ್ಯೆ, ದಿನಾಂಕ: 05/06/2021.

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಿತ ಪತ್ರಕ್ಕೆ ಸಂಬಂಧಿಸಿದಂತೆ, ತಮ್ಮ ಸಂಸ್ಥೆಯಲ್ಲಿ ಈಗಾಗಲೇ ಎನ್.ಬಿ.ಎ ಚಟುವಟಿಕೆಗಳನ್ನು ನಡೆಸುವ ಸಲುವಾಗಿ IQAC ಸಂಯೋಜಕರು, N.B.A Institute ಸಂಯೋಜಕರು ಮತ್ತು ಕೋರ್ಸು/ಪ್ರೋಗ್ರಾಂ ಸಂಯೋಜಕರನ್ನು ನೇಮಿಸಿರುವುದು ಸರಿಯಷ್ಟೇ.

ಎನ್.ಬಿ.ಎ ಚಟುವಟಿಕೆಗಳನ್ನು ತೀವ್ರಗತಿಯಲ್ಲಿ ಪೂರ್ಣಗೊಳಿಸಬೇಕಾಗಿರುವುದರಿಂದ ತಮ್ಮ ಸಂಸ್ಥೆಯಲ್ಲಿರುವ ಎಲ್ಲಾ ಕೋರ್ಸು/ಪ್ರೋಗ್ರಾಂಗಳಿಗೆ, ಕೋರ್ಸು/ಪ್ರೋಗ್ರಾಂ ಸಂಯೋಜಕರನ್ನು ಮತ್ತು ಎನ್.ಬಿ.ಎ ಮಾನ್ಯತೆ ಮೌಲ್ಯಮಾಪನಕ್ಕೆ ಸಂಬಂಧಿಸಿದ ಪ್ರತಿ Criteria ಗಳಿಗೆ (1 ರಿಂದ 10) ಪ್ರತ್ಯೇಕವಾಗಿ ಸಂಯೋಜಕರನ್ನು ನೇಮಿಸಿ ಅವರ ಹೆಸರು ಮತ್ತು ಮೊಬೈಲ್ ದೂರವಾಣಿ ಸಂಖ್ಯೆಯನ್ನು ಕೆಳಗೆ ತಿಳಿಸಿದ ಆಯುಕ್ತಾಲಯದ ಕೇಂದ್ರ ಕಚೇರಿಯಲ್ಲಿರುವ ಎನ್.ಬಿ.ಎ ಸಂಯೋಜಕರಿಗೆ ದಿನಾಂಕ:30/04/2022ರ ಒಳಗಾಗಿ ಸಲ್ಲಿಸಲು ಸೂಚಿಸಿದೆ.

ಮುಂದುವರೆದು, ತಮ್ಮ ಸಂಸ್ಥೆಯ ಎಲ್ಲಾ ಪ್ರೋಗ್ರಾಂಗಳಿಗೆ ಸಂಬಂಧಿಸಿದಂತೆ, Prequalifier ನ್ನು ಎನ್.ಬಿ.ಎ ಪೋರ್ಟಲ್‌ನಿಂದ ಪಡೆದು, ಅದರಲ್ಲಿರುವ ಮಾಹಿತಿಗಳನ್ನು ಪೂರ್ಣಗೊಳಿಸಿ Hard copy ಯನ್ನು ಜಂಟಿ ನಿರ್ದೇಶಕರು (ಸಿಡಿಸಿ)ಯವರಿಗೆ ಮತ್ತು Scanned copy ಅನ್ನು dtenbaengg@gmail.com ಗೆ ದಿನಾಂಕ:30/04/2022ರ ಒಳಗಾಗಿ ಸಲ್ಲಿಸಲು ಸೂಚಿಸಿದೆ ಹಾಗೂ ಈ ಹಿಂದೆ ಎನ್.ಬಿ.ಎ ಪೋರ್ಟಲ್‌ನಲ್ಲಿ ನೋಂದಣಿಯಾಗಿರುವ ಸಂಸ್ಥೆಗಳು ತಮ್ಮ User ID ಮತ್ತು Password ಗಳು ಚಾಲ್ತಿಯಲ್ಲಿರುವುದನ್ನು ಖಚಿತಪಡಿಸಿಕೊಳ್ಳಲು ಸೂಚಿಸಲಾಗಿದೆ.

ಜಂಟಿ ನಿರ್ದೇಶಕರು (ಸಿಡಿಸಿ)

ಇವರಿಗೆ: ಸಂಬಂಧಪಟ್ಟ ಎಲ್ಲಾ ಸರ್ಕಾರಿ ಇಂ. ಕಾಲೇಜು ಪ್ರಾಚಾರ್ಯರುಗಳಿಗೆ ಮತ್ತು NBA ಸಂಯೋಜನಾಧಿಕಾರಿಗಳು: ಸೂಕ್ತ ಕ್ರಮಕ್ಕಾಗಿ.

ಪ್ರತಿ: 1. ಮಾನ್ಯ ಆಯುಕ್ತರ ಆಪ್ತ ಶಾಖೆ– ಮಾಹಿತಿಗಾಗಿ. 2.ಇ–ಗೌವರ್ನೆನ್ಸ್ ವಿಭಾಗ– ಪ್ರಕಟಿಸಲು.

ಕರ್ನಾಟಕ ಸರ್ಕಾರ

**ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ**

ಸಂಖ್ಯೆ: ತಾಂಶಿನಿ 03 ಸಿಡಿಸಿ(1) 2019-20

ಆಯುಕ್ತರ ಕಚೇರಿ
ಅರಮನೆ ರಸ್ತೆ, ಬೆಂಗಳೂರು-560 001.
ದಿನಾಂಕ: 21-04-2022.

## ಜ್ಞಾಪನ

ವಿಷಯ: ರಾಜ್ಯದ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳಲ್ಲಿನ ಕೋರ್ಸುಗಳಿಗೆ N.B.A ಮಾನ್ಯತೆ ಪಡೆಯುವ ಬಗ್ಗೆ.

ಉಲ್ಲೇಖ: 1.ಎ.ಐ.ಸಿ.ಟಿ.ಇ ನವದೆಹಲಿ ಇವರ ರೆಗ್ಯುಲೇಷನ್ಸ್ F.No.37.3/Legal/AICTE/2014, ದಿನಾಂಕ: 29/01/2014.
2. ಈ ಕಚೇರಿ ಪತ್ರ ಸಮ ಸಂಖ್ಯೆ, ದಿನಾಂಕ: 05/06/2021.
3. ಈ ಕಚೇರಿ ಪತ್ರ ಸಂಖ್ಯೆ ತಾಂಶಿನಿ 50 ಡಿವಿಪಿ(1) 2021, ದಿನಾಂಕ:23/03/2022.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ(1)ರ ಅನ್ವಯ ರಾಜ್ಯದ ಎಲ್ಲಾ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ನಡೆಸುವ ಎಲ್ಲಾ ಕೋರ್ಸುಗಳಿಗೆ ಎನ್.ಬಿ.ಎ ಮಾನ್ಯತೆ ಪಡೆಯುವುದನ್ನು ಎ.ಐ.ಸಿ.ಟಿ.ಇ ಕಡ್ಡಾಯಗೊಳಿಸಿರುತ್ತದೆ. ಉಲ್ಲೇಖ(2)ರ ಅನ್ವಯ ರಾಜ್ಯದ ಎಲ್ಲಾ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ತಮ್ಮ ಸಂಸ್ಥೆಯಲ್ಲಿನ ಕೋರ್ಸುಗಳಿಗೆ ಎನ್.ಬಿ.ಎ ಮಾನ್ಯತೆ ಪಡೆಯುವ ಸಂಬಂಧ ಇರುವ ಎಲ್ಲಾ ಕಾರ್ಯಚಟುವಟಿಕೆಗಳನ್ನು ಪ್ರಾರಂಭಿಸಲು ಇಲಾಖೆಯು ತಿಳಿಸಿದ್ದು, ಎಲ್ಲಾ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳಲ್ಲಿ Internal Quality Assurance Cell (IQAC) ಅನ್ನು ಸ್ಥಾಪಿಸಿ, ಪ್ರತಿ ಕೋರ್ಸುಗಳಲ್ಲಿ ಎನ್.ಬಿ.ಎ ಮಾನದಂಡಗಳ ಪ್ರಕಾರ ನಿರ್ವಹಿಸಬೇಕಾಗಿರುವ ಕಡತಗಳನ್ನು ತಯಾರಿಮಾಡಿಕೊಳ್ಳಲು ಸೂಚಿಸಲಾಗಿತ್ತು. ಮುಂದುವರೆದು, ಉಲ್ಲೇಖ(3)ರ ಪ್ರಕಾರ ಸರ್ಕಾರವು ಆಯ್ದ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳ ಕೋರ್ಸುಗಳಿಗೆ ಎನ್.ಬಿ.ಎ ಮಾನ್ಯತೆ ಪಡೆಯುವ ಸಲುವಾಗಿ ಅನುದಾನವನ್ನು ಈಗಾಗಲೇ ಬಿಡುಗಡೆಗೊಳಿಸಿದೆ.

ಮೇಲ್ಕಂಡ ಎಲ್ಲಾ ಅಂಶಗಳ ಹಿನ್ನಲೆಯಲ್ಲಿ, ಅನುಬಂಧದಲ್ಲಿರುವ ಸಂಸ್ಥೆಗಳ ಪ್ರಾಚಾರ್ಯರು ತಮ್ಮ ಸಂಸ್ಥೆಯಲ್ಲಿರುವ ಎಲ್ಲಾ ಕೋರ್ಸುಗಳಿಗೆ ಎನ್.ಬಿ.ಎ ಮಾನದಂಡಗಳ ಪ್ರಕಾರ, ಮಾನ್ಯತೆ ಪಡೆಯುವಲ್ಲಿ ಪ್ರಕ್ರಿಯೆಗಳನ್ನು ತೀವ್ರಗತಿಯಲ್ಲಿ ಪೂರ್ಣಗೊಳಿಸಲು ಸೂಚಿಸಿದೆ. ಮುಂದುವರೆದು, ತಮ್ಮ ಸಂಸ್ಥೆಯ ಹಂತದಲ್ಲಿ ಎನ್.ಬಿ.ಎ ಮಾನ್ಯತೆ ಪಡೆಯುವಲ್ಲಿ ಹೆಚ್ಚಿನ ಅವಕಾಶವಿರುವ ಕೋರ್ಸುಗಳನ್ನು ಎನ್.ಬಿ.ಎ ಮಾನದಂಡಗಳ ಅನ್ವಯ

ಪರಿಶೀಲಿಸಿ, ಅಂತಹುಗಳಲ್ಲಿ ಒಂದು ಕೋರ್ಸನ್ನು ಅಂತಿಮಗೊಳಿಸಿ, ಅವುಗಳ Pre qualifier ಮತ್ತು SAR ನ್ನು ಎನ್.ಬಿ.ಎ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಲು ಸಿದ್ದರಾಗಿರಬೇಕೆಂದು ಈ ಮೂಲಕ ಸೂಚಿಸಲಾಗಿದೆ.

ಜಂಟಿ ನಿರ್ದೇಶಕರು (ಪಿಡಿಸಿ)

ಇವರಿಗೆ: ಸಂಬಂಧಪಟ್ಟ ಎಲ್ಲಾ ಸರ್ಕಾರಿ ಇಂಜಿನಿಯರಿಂಗ್ ಪ್ರಾಚಾರ್ಯರುಗಳಿಗೆ ಮತ್ತು NBA ಸಂಯೋಜನಾಧಿಕಾರಿಗಳು: ಸೂಕ್ತ ಕ್ರಮಕ್ಕಾಗಿ.

ಪ್ರತಿ: 1. ಮಾನ್ಯ ಆಯುಕ್ತರ ಆಪ್ತ ಶಾಖೆ- ಮಾಹಿತಿಗಾಗಿ.
2. ಮಾನ್ಯ ನಿರ್ದೇಶಕರ ಆಪ್ತ ಶಾಖೆ- ಮಾಹಿತಿಗಾಗಿ.
3. ಇ-ಗೌವರ್ನೆನ್ಸ್ ವಿಭಾಗ- ತಾಂತ್ರಿಕ ಶಿಕ್ಷಣ ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.

**ಅನುಬಂಧ**

| Sl.No | Name of the Engineering College |
|---|---|
| 1 | Govt. SKSJTI, Bangalore |
| 2 | Government Engineering College, Ramanagara. |
| 3 | Government Engineering College, Haveri. |
| 4 | Government Engineering College, Hassan. |